

ತಂತ್ರ ಮತ್ತು ಆಶಯಗಳನ್ನು ವಿಮರ್ಶೆಗೆ ಒಳಪಡಿಸುವಲ್ಲಿ ಉದಾರತೆ ತೋರಿರುವ ಇಲ್ಲಿಯ ಕ್ರಮವು ಮುಖ್ಯವಾಗಿ ಕಾದಂಬರಿಗಳ ಒಟ್ಟಾರೆ ಆಶಯದಲ್ಲಿಯೇ ಅದನ್ನು ಗುರ್ತಿಸುವ ಪ್ರಯತ್ನವನ್ನು ಮಾಡಿದೆ. ಭಾಷೆಯ ಬಳಕೆಯ ವಿಶಿಷ್ಟತೆಯ ಛಾಪು ರೂಪುಗೊಂಡ ಬಗೆಯನ್ನು ವಿವರಿಸಿದೆ. ಕಂಬಾರರ ಕಾದಂಬರಿಗಳನ್ನು ಕುರಿತ ತಮ್ಮ ವಿಶ್ಲೇಷಣೆಯನ್ನು ಪ್ರಮಾಣೀಕರಿಸಲು ಹಲವು ವಿಮರ್ಶಕರ ಹೇಳಿಕೆಗಳನ್ನು ಉಲ್ಲೇಖಿಸುತ್ತಾ, ಆ ವಿಮರ್ಶಕರ ಚಿಂತನೆಗೆ ತಮ್ಮ ಸಮ್ಮತಿಯನ್ನು ಸೂಚಿಸುವುದರೊಂದಿಗೆ ತಮ್ಮ ವಿಚಾರಗಳಿಗೆ ಸಾರ್ವತ್ರಿಕ ಸಮ್ಮತಿಯನ್ನು ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ.

ಒಟ್ಟಾರೆಯಾಗಿ ಈ ಕೃತಿಯಲ್ಲಿ ಶ್ರೀ ಮಂಜುನಾಥ ಅವರು 'ಕಂಬಾರರ ಎರಡು ಪ್ರಮುಖ ಕಾದಂಬರಿಗಳಾದ ಸಿಂಗಾರೆವ್ವ ಮತ್ತು ಅರಮನೆ ಹಾಗೂ ಶಿಖರಸೂರ್ಯ' ಕಾದಂಬರಿಗಳ ಎಲ್ಲ ಆಯಾಮಗಳನ್ನು ವಿಮರ್ಶೆಗೆ, ವಿಶ್ಲೇಷಣೆಗೆ ಒಳಪಡಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಶ್ರೀ ಅನ್ನಪೂರ್ಣ ಪ್ರಕಾಶನ
ಬೆಂಗಳೂರು

₹ 80/-

ISBN 93-82095-09-8
9 789382 095095 95

# ಕಂಬಾರರ ಎರಡು ಕಾದಂಬರಿಗಳು

## (ವಿಮರ್ಶಾತ್ಮಕ ಅಧ್ಯಯನ)



ಎಂ. ಕೆ. ಮಂಜುನಾಥ